# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** 900(914)

**ಸದಸ್ಯರ ಹೆಸರು** ಶ್ರೀ ಯತೀಂದ್ರ. ಎಸ್ (ವಿಧಾನಸಭಾ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** 15.12.2025

**ಉತ್ತರಿಸುವವರು** ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು. ಮಾನವ ಹಾನಿ ಹಾಗೂ ಸಾಕು ಪ್ರಾಣಿಗಳ ಹಾನಿಗೆ ಒಳಗಾದ ಪ್ರಕರಣಗಳು ಎಷ್ಟು:</td><td>ವನ್ಯಪ್ರಾಣಿಗಳಿಂದ ಮಾನವ ಹಾಗೂ ಸಾಕು ಪ್ರಾಣಿಗಳ ಹಾನಿಗೆ ಒಳಗಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಮಾನವ ಪ್ರಾಣ ಹಾನಿ ಪ್ರಕರಣಗಳ ಸಂಖ್ಯೆ</th><th>ಸಾಕು ಪ್ರಾಣಿಗಳ ಹಾನಿ ಪ್ರಕರಣಗಳ ಸಂಖ್ಯೆ</th></tr>
<tr><td>2025-26 (ನವೆಂಬರ್ ಅಂತ್ಯಕ್ಕೆ)</td><td>34</td><td>1784</td></tr>
</table></td></tr>
<tr><td>ಆ)</td><td>ಈ ರೀತಿ ಮಾನವ ಹಾನಿ ಪ್ರಕರಣಗಳಲ್ಲಿ ಕುಟುಂಬದ ನೆರವಿಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು: ಯಾವ ರೀತಿಯ ಕ್ರಮ ತೆಗೆದುಕೊಂಡು ಕುಟುಂಬಗಳಿಗೆ ಸಹಾಯ ಮಾಡಲಾಗುತ್ತಿದೆ?(ವಿವರ ನೀಡುವುದು)</td><td>i) ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲು ಅರಣ್ಯದಂಚಿನ ಗ್ರಾಮಗಳಲ್ಲಿ "AI" Based Camera ಮತ್ತು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಅಳವಡಿಸಿ ನಿಗಾ ವಹಿಸಲಾಗುತ್ತಿದೆ.<br><br>ii) ಅರಣ್ಯದಂಚಿನ ಪ್ರದೇಶಗಳಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿ ಗಡಿರೇಖೆಗಳಲ್ಲಿ ಗಸ್ತು ಕಾರ್ಯ ನಿರ್ವಹಿಸಲಾಗುತ್ತಿದೆ.<br><br>iii) ವನ್ಯಜೀವಿಗಳ ಇರುವಿಕೆಯ ಬಗ್ಗೆ ಸ್ಥಳೀಯ ಜನರಿಗೆ ಅರಿವು ಮೂಡಿಸಿ, ಜಾಗರೂಕರಾಗಿರಲು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿರುತ್ತದೆ.<br><br>iv) ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆಯಿರುವ / ಸಂಘರ್ಷದಲ್ಲಿ ತೊಡಗಿರುವ ವನ್ಯಜೀವಿಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆ ಹಿಡಿಯಲಾಗಿರುತ್ತದೆ.<br><br>v) ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ "ಆನೆ ಎಲ್ಲಿ" ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. ಮುಂದುವರೆದು, ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಕೇಂದ್ರ ಸ್ಥಾನದಲ್ಲಿ **ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC) ಹಾಗೂ 11 ವಿಭಾಗಗಳಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC)** ಸ್ಥಾಪಿಸಲಾಗುತ್ತಿದೆ.<br><br>ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ<br>ಪ್ರಕರಣಗಳಿಗೆ ಸರ್ಕಾರಿ ಆದೇಶ ಸಂಖ್ಯೆಃ ಅಪಜೀ. 114 ಎಫ್.ಡಬ್ಲ್ಯೂ.ಎಲ್.2022, ದಿನಾಂಕಃ 29.04.2025 ರನ್ವಯ ರೂ.20.00 ಲಕ್ಷಗಳ ಪರಿಹಾರ ಧನವನ್ನು ನೀಡಲಾಗುತ್ತಿದೆ. ಅಲ್ಲದೇ ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022. ದಿನಾಂಕ: 15-12-2022ರಂತೆ ಪ್ರತೀ ತಿಂಗಳಿಗೆ ರೂ.4.000/- ಗಳಂತೆ 05 ವರ್ಷಗಳ ಅವಧಿಗೆ ಮಾಶಾಸನವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ವನ್ಯಜೀವಿಗಳ ಆವಾಸಸ್ಥಾನ ಅಭಿವೃದ್ಧಿ ಕಾಮಗಾರಿಗಳು/ ಲಂಟಾನ/ಇತರೆ ಕಳೆಗಿಡಗಳನ್ನು ನಿರ್ಮೂಲನೆ ಮಾಡಿ ಹುಲ್ಲುಗಾವಲುಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. |

**ಅಪಜೀ 346 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ, ಆಸ್ತಿ-ಪಾಸ್ತಿ ನಷ್ಟ ಪ್ರಕರಣಗಳಿಗೆ ಪಾವತಿಸುತ್ತಿರುವ ಪರಿಹಾರ ಧನವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರದ ಆದೇಶ ಸಂಖ್ಯೆ:ಅಪಜೀ-143-ಎಫ್‌ಡಬ್ಲ್ಯೂಎಲ್-2010, ದಿನಾಂಕ: 30/04/2011 ಮತ್ತು 03/08/2011.

(2) ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19/09/2016.

(3) ಸರ್ಕಾರದ ಆದೇಶ ಸಂಖ್ಯೆ:ಅಪಜೀ 61 ಎಫ್‌ಎಪಿ 2018, ಬೆಂಗಳೂರು, ದಿನಾಂಕ:16/10/2018.

(4) ಸರ್ಕಾರದ ಆದೇಶ ಸಂಖ್ಯೆ:ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ:07/01/2020

(5) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಪತ್ರ ಸಂಖ್ಯೆ:ಪ್ರಮುಅಸಂ(ವಜೀ)/ಸಿ2/ಸಿಆರ್-37/2011-12

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಿಂದ (4) ವರೆಗಿನ ಸರ್ಕಾರದ ಆದೇಶಗಳಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆನಾಶ, ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಸಾಕು ಪ್ರಾಣಿಗಳ ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿ ಹಾಗೂ ಗಾಯಗೊಂಡವರಿಗೆ ನೀಡಲಾಗುತ್ತಿರುವ ಪರಿಹಾರದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸುತ್ತಿರುವ ದಯಾತ್ಮಕ ಧನವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪ್ರಸ್ತಾವನೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು 2022-23ನೇ ಸಾಲಿನ ಸೆಪ್ಟೆಂಬರ್ ಮಾಹೆಯಲ್ಲಿ ನಡೆದ ಅಧಿವೇಶನದಲ್ಲಿ ದಿನಾಂಕ:21/09/2022 ರಂದು ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಪ್ರಸ್ತುತ ಪಾವತಿಸಲಾಗುತ್ತಿರುವ ಪರಿಹಾರ ಧನವನ್ನು ದುಪ್ಪಟ್ಟು ಮಾಡುವುದಾಗಿ ಘೋಷಿಸಿರುವುದಾಗಿ ಮತ್ತು ಅದರಂತೆ ಪರಿಹಾರ ಧನವನ್ನು ಪರಿಷ್ಕರಿಸಲು ಕೋರಿರುತ್ತಾರೆ.

...2

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ಬೆಂಗಳೂರು. ದಿನಾಂಕ:15-12-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ, ಆಸ್ತಿ-ಪಾಸ್ತಿ ನಷ್ಟ ಪ್ರಕರಣಗಳಲ್ಲಿ ಈ ಹಿಂದಿನ ಆದೇಶಗಳನ್ವಯ ನೀಡುತ್ತಿರುವ ಪರಿಹಾರ ಧನ ಮತ್ತು ಮಾಶಾಸನ ಧನವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಪ್ರಕರಣಗಳ ವಿವರ | ಪ್ರಸ್ತುತ ನೀಡಲಾಗುತ್ತಿರುವ ದಯಾತ್ಮಕ ಧನ | ನಿಗಧಿಪಡಿಸಲಾದ ದಯಾತ್ಮಕ ಧನ |
|---|---|---|---|
| 1 | ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳು | ರೂ.7.50 ಲಕ್ಷ (ಏಳು ಲಕ್ಷ ಐವತ್ತು ಸಾವಿರಗಳು ರೂಪಾಯಿ) | ರೂ.15.00 ಲಕ್ಷ (ಹದಿನೈದು ಲಕ್ಷ ರೂಪಾಯಿ) |
| 2 | ಕಾಡುಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.5.00 ಲಕ್ಷ (ಐದು ಲಕ್ಷ ರೂಪಾಯಿ) | ರೂ.10.00 ಲಕ್ಷ (ಹತ್ತು ಲಕ್ಷ ರೂಪಾಯಿ) |
| 3 | ಕಾಡುಪ್ರಾಣಿಯಿಂದ ಉಂಟಾಗುವ ಭಾಗಶಃ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.2.50 ಲಕ್ಷ (ಎರಡು ಲಕ್ಷ ಐವತ್ತು ಸಾವಿರ ರೂಪಾಯಿ) | ರೂ.5.00ಲಕ್ಷ (ಐದು ಲಕ್ಷ ರೂಪಾಯಿ) |
| 4 | ಕಾಡುಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಟ ಮೊತ್ತ ಪ್ರಕರಣಗಳು | ರೂ30,000/- (ಮೂವತ್ತು ಸಾವಿರ ರೂಪಾಯಿ) | ರೂ.60,000/- (ಅರವತ್ತು ಸಾವಿರ ರೂಪಾಯಿ) |
| 5 | ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ | ರೂ. 10,000/- (ಹತ್ತು ಸಾವಿರ ರೂಪಾಯಿ) | ರೂ.20,000/- (ಇಪತ್ತು ಸಾವಿರ ರೂಪಾಯಿ) |
| 6 | **ಮಾಸಾಶನ**: ವನ್ಯಪ್ರಾಣಿಗಳ ದಾಳಿ / ಹಾವಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಹಾಗೂ ಶಾಶ್ವತ ಅಂಗವಿಕಲತೆಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿರುವ ಧಯಾತ್ಮಕ ಧನದ ಜೊತೆಗೆ ಪ್ರತೀ ತಿಂಗಳಂತೆ 5 ವರ್ಷಗಳ ವರೆಗೆ ಮಾಸಾಶನ | ರೂ.2000/- (ಎರಡು ಸಾವಿರ ರೂಪಾಯಿ) | ರೂ.4,000/- (ಐದು ಸಾವಿರ ರೂಪಾಯಿ) |

...3

ಈ ದಯಾತ್ಮಕ ಧನ ಪಾವತಿಗೆ ಸಂಬಂಧಿಸಿದಂತೆ ಈಗಾಗಲೇ ಮೇಲೆ ಓದಲಾಗಿರುವ ಸರ್ಕಾರಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತು ಮತ್ತು ನಿಬಂಧನೆಗಳು ಯಾವುದೇ ಬದಲಾವಣೆ ಇಲ್ಲದೆ ಮುಂದುವರೆಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 696 ವೆಚ್ಚ-5/2022, ದಿನಾಂಕ:14/12/2022ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15/12/22

**(ಶಂಕರ ಎಸ್)**
ಸರ್ಕಾರದ ಜಂಟಿ ಕಾರ್ಯದರ್ಶಿ-2
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
15/12/22

**ಇವರಿಗೆ,**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003 ಇವರಿಗೆ ಹಾಗೂ 250 ಪ್ರತಿಗಳನ್ನು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, #432, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇಲ್ಲಿಗೆ ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ / ವನ್ಯಜೀವಿ) / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ)
5. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಪಾವತಿಸುತ್ತಿರುವ ಪರಿಹಾರ ಧನವನ್ನು ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:-**

1. ಸರ್ಕಾರದ ಆದೇಶ ಸಂಖ್ಯೆ: ಅಪಜೀ-143-ಎಫ್‌ಡಬ್ಲ್ಯೂಎಲ್-2010, ದಿನಾಂಕ: 30.04.2011 ಮತ್ತು 03.08.2011.
2. ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19.09.2016.
3. ಸರ್ಕಾರದ ಆದೇಶ ಸಂಖ್ಯೆ:ಅಪಜೀ 61 ಎಫ್‌ಎಪಿ 2018, ಬೆಂಗಳೂರು, ದಿನಾಂಕ:16.10.2018.
4. ಸರ್ಕಾರದ ಆದೇಶ ಸಂಖ್ಯೆ:ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ:07.01.2020.
5. ಸರ್ಕಾರದ ಆದೇಶ ಸಂಖ್ಯೆ:ಅಪಜೀ 114 ಎಫ್‌ಡಬ್ಲ್ಯೂಎಲ್ 2022, ದಿನಾಂಕ:15.12.2022 ಮತ್ತು ಸೇರ್ಪಡೆ ಆದೇಶ ದಿನಾಂಕ:24.05.2023.
6. 2025-26 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:410 ರ ಘೋಷಣೆ.
7. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಏಕ ಕಡತ ಸಂಖ್ಯೆ:KFD/WL/B2 (BUD)/3/2025-WL-KFD PART (1) (1732849).

* * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಿಂದ (5) ವರೆಗಿನ ಸರ್ಕಾರದ ಆದೇಶಗಳಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡವರಿಗೆ ಹಾಗೂ ಆಸ್ತಿ-ಪಾಸ್ತಿ ನಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸುತ್ತಿರುವ ಪರಿಹಾರ ಧನವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ, ದಿನಾಂಕ:07.03.2025 ರಂದು ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ **2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:410 ರಲ್ಲಿ "ವನ್ಯ ಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ. 15 ಲಕ್ಷಗಳಿಂದ ರೂ. 20 ಲಕ್ಷಗಳಿಗೆ ಹೆಚ್ಚಿಸಲಾಗುವುದು"** ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಏಕ ಕಡತದಲ್ಲಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರು 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:410ರ ಘೋಷಣೆಯಂತೆ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.15 ಲಕ್ಷಗಳಿಂದ ರೂ.20 ಲಕ್ಷಗಳಿಗೆ ಹೆಚ್ಚಿಸುವಂತೆ ಹಾಗೂ ದಿನಾಂಕ:01-04-2025 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022,**
**ಬೆಂಗಳೂರು, ದಿನಾಂಕ: 29.04.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಈ ಹಿಂದಿನ ಆದೇಶಗಳನ್ವಯ ನೀಡುತ್ತಿರುವ

.....2

ಪರಿಹಾರ ಧನವನ್ನು ಪರಿಷ್ಕರಿಸಿ 2025-26 ಆರ್ಥಿಕ ಸಾಲಿನಿಂದ, ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಪ್ರಕರಣಗಳ ವಿವರ | ಪ್ರಸ್ತುತ ನೀಡಲಾಗುತ್ತಿರುವ ಪರಿಹಾರ ಧನ | ನಿಗದಿಪಡಿಸಲಾದ ಪರಿಹಾರ ಧನ |
|---|---|---|---|
| 1 | ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳು | ರೂ.15.00 ಲಕ್ಷ (ಹದಿನೈದು ಲಕ್ಷ ರೂಪಾಯಿಗಳು) | ರೂ.20.00 ಲಕ್ಷ (ಇಪ್ಪತ್ತು ಲಕ್ಷ ರೂಪಾಯಿಗಳು) |

ಈ ಆದೇಶವು 01.04.2025 ದಿನಾಂಕದಿಂದ ಸಂಭವಿಸುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು 2025-26ನೇ ಸಾಲಿಗೆ ಲೆಕ್ಕಶೀರ್ಷಿಕೆ:2406-02-110-0-01-015 ರಡಿ ನಿಗದಿಪಡಿಸಲಾಗಿರುವ ಅನುದಾನದಿಂದ ಭರಿಸುವಂತೆ ತಿಳಿಸಿದೆ.

ಈ ಪರಿಹಾರ ಧನ ಪಾವತಿಗೆ ಸಂಬಂಧಿಸಿದಂತೆ, ಈಗಾಗಲೇ ಮೇಲೆ ಓದಲಾಗಿರುವ ಸರ್ಕಾರಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತು ಮತ್ತು ನಿಬಂಧನೆಗಳು ಯಾವುದೇ ಬದಲಾವಣೆ ಇಲ್ಲದೇ ಮುಂದುವರೆಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 315 ವೆಚ್ಚ-5/2025, ದಿನಾಂಕ:21.04.2025ರಲ್ಲಿ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ: PDS 40 PFR 2025 ದಿನಾಂಕ: 29.04.2025 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560 003 ಇವರಿಗೆ ಹಾಗೂ 250 ಪ್ರತಿಗಳನ್ನು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, #432, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿಗೆ ಒದಗಿಸುವಂತೆ ಕೋರಿದೆ.

.....3

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ ಲೆಕ್ಕಪರಿಶೋಧನೆ), ಕರ್ನಾಟಕ ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003.
4. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ) /ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು {ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರು ಇವರ ಮುಖಾಂತರ}
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5 & 7), ವಿಧಾನಸೌಧ, ಬೆಂಗಳೂರು
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ & ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ) ರವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ & ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಅರಣ್ಯ) ರವರ ಆಪ್ತ ಸಹಾಯಕರು, ಅರಣ್ಯ, ಜೀವಿಪರಿಸ್ಥಿತಿ & ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ|| ಯತೀಂದ್ರ. ಎಸ್ (ವಿಧಾನಸಭಾ ಕ್ಷೇತ್ರ) ರವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 900 (914)ಕ್ಕೆ

## ಪೂರಕ ಟಿಪ್ಪಣಿ

ವನ್ಯಪ್ರಾಣಿಗಳಿಂದ ಮಾನವ ಹಾಗೂ ಸಾಕು ಪ್ರಾಣಿಗಳ ಹಾನಿಗೆ ಒಳಗಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಮಾನವ ಪ್ರಾಣ ಹಾನಿ ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಪರಿಹಾರದ ಮೊತ್ತ | ಸಾಕು ಪ್ರಾಣಿಗಳ ಹಾನಿ ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಪರಿಹಾರದ ಮೊತ್ತ |
|---|---|---|---|---|
| 2025-26 (ನವೆಂಬರ್ ಅಂತ್ಯಕ್ಕೆ) | 35 | 620.00 | 1784 | 245.01 |

| 2025-26 ನೇ ಸಾಲಿನಲ್ಲಿ ಮಾನವ ವನ್ಯಪ್ರಾಣಿ ಸಂಘರ್ಷದಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಪಾವತಿಸಲಾದ ಅನುದಾನದ ವಿವರ | | | | | |
|---|---|---|---|---|---|
| ಕ್ರ. ಸಂ | ಜಿಲ್ಲೆ | ಸ್ಥಳ | ಹೆಸರು | ಪಾವತಿಸಲಾದ ಪರಿಹಾರದ ಮೊತ್ತ | ಷರಾ |
| 1 | ಕೊಡಗು | ಮೇಕೂರು ಹೊಸಕೆರೆ ಗ್ರಾಮ, ತಿತಿಮತಿ ವಲಯ | ಸೆಲ್ವಂ | 20.00 | ಪಾವತಿಸಲಾಗಿದೆ |
| 2 | ಕೊಡಗು | ಕುಶಾಲನಗರ ವಲಯ | ಎಸ್.ಆರ್ ಚಿಣ್ಣಪ್ಪ | 20.00 | ಪಾವತಿಸಲಾಗಿದೆ |
| 3 | ಹಾಸನ | ಸಕಲೇಶಪುರ ತಾಲ್ಲೂಕು, ಬೆಳಗೋಡು ಹೋಬಳಿ, ಬೈಕೆರೆ ಗ್ರಾಮದ ವಾಸಿ | ಷಣ್ಮುಖ ಬಿನ್ ಅಮೃತೇಶ್, | 20.00 | ಪಾವತಿಸಲಾಗಿದೆ |
| 4 | ದಕ್ಷಿಣ ಕನ್ನಡ | ಅರ್ತಿಯಡ್ಕ, ಕೊಳ್ತಿಗೆ ಗ್ರಾಮ, ಪುತ್ತೂರು ವಲಯ | ಸಲ್ಲಮ್ಮ ಕೋಂ ತಿಲಕ್, | 20.00 | ಪಾವತಿಸಲಾಗಿದೆ |
| 5 | ಚಾಮರಾಜನಗರ | ಹುತ್ತೂರು ಶಾಖೆ, ಹುತ್ತೂರು ಗಸ್ತಿನ ಕೊಮ್ಮರನಕತ್ರಿ ಗ್ರಾಮ, ಲೊಕ್ಕನಹಳ್ಳಿ ಹೋಬಳಿ, ಹನೂರು ತಾಲ್ಲೂಕು, P.G Palya WL Range | ನಂಜಪ್ಪ | 20.00 | ಪಾವತಿಸಲಾಗಿದೆ |
| 6 | ಹಾಸನ | ಕೋಡಿಹಳ್ಳಿ ಗ್ರಾಮ, ಯಸಲೂರು ವಲಯ | ತಿಮ್ಮಪ್ಪಗೌಡ | 20.00 | ಪಾವತಿಸಲಾಗಿದೆ |
| 7 | ಮೈಸೂರು | ಬಳ್ಳೆ ಹಾಡಿ, ಡಿ.ಬಿ ಕುಪ್ಪೆ ವಲಯ, ಹೆಚ್.ಡಿ ಕೋಟೆ | ಸೀತೆ | - | ಕಾಡಿನಲ್ಲಿ ಜೇನು ಸಂಗ್ರಹಿಸಿ ಬರುವಾಗ ಸಂಭವಿಸಿರುತ್ತದೆ. ಪರಿಹಾರ ಪಾವತಿಸಲು ಅವಕಾಶವಿರುವುದಿಲ್ಲ |
| 8 | ಕೊಡಗು | ಹೆಬ್ಬಾಲೆ ಗ್ರಾಮದ ಅಯ್ಯಪ್ಪ ಭದ್ರಕಾಳಿ ದೇವರಪುರ ಕಡಂಗ ರಸ್ತೆಯಲ್ಲಿ, | ಅಣ್ಣಯ್ಯ | 20.00 | ಪಾವತಿಸಲಾಗಿದೆ |

| | | | | | |
|---|---|---|---|---|---|
| | | ದೇವಮಚ್ಚಿ ಶಾಖೆ, ತಿತಿಮತಿ ವಲಯ | | | |
| 9 | ಹಾಸನ | ಅಂಕಿಹಳ್ಳಿ, ಬೇಲೂರು ವಲಯ | ಚಂದ್ರಕಲಾ | 20.00 | ಪಾವತಿಸಲಾಗಿದೆ |
| 10 | ಮೈಸೂರು | ಹನಗೋಡು ಹೋಬಳಿ ಸೊಳ್ಳೆಪುರ ಹುಣಸೂರು ವಲಯ | ಹರೀಶ್ | 20.00 | ಪಾವತಿಸಲಾಗಿದೆ |
| 11 | ಕೊಡಗು | ಕುಕ್ಕುನೂರು-ಕರಡಿಗುಡ್ಡ ವಿರಾಜಪೇಟೆ ವಲಯ | ಪುರುಷೋತ್ತಮ | 20.00 | ಪಾವತಿಸಲಾಗಿದೆ |
| 12 | ಚಾಮರಾಜನಗರ | ಬೇಡಗುಳಿ ಗ್ರಾಮ, ಪುಣಜೂರು ವಲಯ | ರಂಗಮ್ಮ ಕೋಂ ಚಂಗುಚನ್ನಂಜ | 20.00 | ಪಾವತಿಸಲಾಗಿದೆ |
| 13 | ಶಿವಮೊಗ್ಗ | ಬಂಡಿಗುಡ್ಡ ಗ್ರಾಮ, ಚನ್ನಗಿರಿ ವಲಯ | ಕುಮಾರ ಬಿ | 20.00 | ಪಾವತಿಸಲಾಗಿದೆ |
| 14 | ಚಿಕ್ಕಮಗಳೂರು | ಹಲಗಡಕ ಗ್ರಾಮ, ಬಾಳೂರು ಹೋಬಳಿ, ಮೂಡಗೆರೆ ತಾ\|\|, ಕೊಪ್ಪ/ಕಳಸ ವಲಯ | ರಮೇಶ್ ಬಿನ್ ವೆಂಕಟಪ್ಪ | 20.00 | ಪಾವತಿಸಲಾಗಿದೆ |
| 15 | ಚಾಮರಾಜನಗರ | ಬಿಳಿಗಿರಿ ರಂಗನಬೆಟ್ಟದ ಸೀಗೆಬೆಟ್ಟಪೋಡಿನ ನಿವಾಸಿ, ಯಳಂದೂರು ವಲಯ | ಸಿದ್ದೇಗೌಡ | 20.00 | ಪಾವತಿಸಲಾಗಿದೆ |
| 16 | ದಕ್ಷಿಣ ಕನ್ನಡ | ಕೊಕ್ಕಡ ಗ್ರಾಮ, ಉಪ್ಪಿನಂಗಡಿ ವಲಯ, | ಶ್ರೀ ಬಾಲಕೃಷ್ಣ ಶೆಟ್ಟಿ | 20.00 | ಪಾವತಿಸಲಾಗಿದೆ |
| 17 | ಚಿಕ್ಕಮಗಳೂರು | ಬನ್ನೂರು ಗ್ರಾಮದ ಸ.ನಂ.14ರಲ್ಲಿ, ನರಸಿಂಹರಾಜಪುರ ತಾಲ್ಲೂಕು, ಬಾಳೆಹೊನ್ನೂರು ಹೋಬಳಿ/ ವಲಯ | ಶ್ರೀಮತಿ ಅನಿತಾ ಎಂ ಕೋಂ ಹಾಲೇಶ್ ಹೆಚ್.ಬಿ, | 20.00 | ಪಾವತಿಸಲಾಗಿದೆ |
| 18 | ಚಾಮರಾಜನಗರ | ಮಲೈ ಮಹದೇಶ್ವರ ಬೆಟ್ಟ ವನ್ಯಜೀವಿ ವಲಯದ ಪೊನ್ನಾಚಿ ಶಾಖೆಯ ಚಂಗಡಿ ಗಸ್ತಿನ ಸಿಪಿಟಿ 49 ರ ಜಬ್ಬರ್ ಕೋರೆಯ ಹತ್ತಿರದ ಸರ್ವೆ ನಂಬರ್ 04 ರ ಮುನಿ ವೆಂಕಟೇಗೌಡರವರ ಜಮೀನು | ಅಂಬೇಕರ್ ಹರಿಪ್ರಸಾದ್ | 5.00 | ನಿಗಧಿತ ದಾಖಲಾತಿಗಳನ್ನು ಸಲ್ಲಿಸಿದ ನಂತರ ಬಾಕಿ ಮೊತ್ತ ಪಾವತಿಸಲಾಗುವುದು |
| 19 | ಚಿಕ್ಕಮಗಳೂರು | ಅಂಡವಾನೆ ಗ್ರಾಮ | ಸುಬ್ರಾಯ್ ಗೌಡ | 20.00 | ಪಾವತಿಸಲಾಗಿದೆ |
| 20 | ಕೊಡಗು | ದಬ್ಬಡ್ಕ ಗ್ರಾಮ, ಚೆಂಬು ಗ್ರಾಮಪಂಚಾಯಿತಿ, ಸಂಬಾಜಿ ವಲಯ | ಕೊಪ್ಪದ ಶಿವಪ್ಪ | 20.00 | ಪಾವತಿಸಲಾಗಿದೆ |
| 21 | ಬೆಂಗಳೂರು ದಕ್ಷಿಣ | ಸಾತನೂರು ಪ್ರಾದೇಶಿಕ ವಲಯ ವ್ಯಾಪ್ತಿಗೆ ಬರುವ ಕಬ್ಬಾಳು ನೀರರೆಕುಳಿ, ಮೋಟನಕಟ್ಟೆ, ಮಾವಿನಗುಂಡಿಹಳ್ಳ, | ಶ್ರೇಯಸ್ | 25.00 | |

| | | | | | |
|---|---|---|---|---|---|
| | | ಹೊಸಹಳ್ಳಿ ಕಟ್ಟೆ, ಕಂಚನಹಳ್ಳಿ ಅರಣ್ಯ ಪ್ರದೇಶದಲ್ಲಿ | | | |
| 22 | ವಿಜಯಪುರ | ಕುಂಚಗನೂರು ಗ್ರಾಮ, ಕೃಷ್ಣಾ ನದಿ, ಮುದ್ದೇಬಿಹಾಳ ವ್ಯಾಪ್ತಿ, | ಕಾಶಪ್ಪ/ಹನುಮಪ್ಪ | 20.00 | ಪಾವತಿಸಲಾಗಿದೆ |
| 23 | ಮೈಸೂರು | ಮಣಿಮೂಲೆ ಹಾಡಿ, ಡಿ.ಬಿ ಕುಪ್ಪೆ ಅಂಚೆ, ಅಂತರಸಂತೆ ಹೋಬಳಿ, ಹೆಗ್ಗಡದೇವನಕೋಟೆ ತಾಲೂಕು, ಡಿ.ಬಿ.ಕುಪ್ಪೆ ವಲಯ | ರಾಜು ಟಿ | - | ನಿಗಧಿತ ದಾಖಲಾತಿಗಳನ್ನು ಸಲ್ಲಿಸದೆ ಇರುವುದರಿಂದ |
| 24 | ಮೈಸೂರು | ಮಲದ ಹಾಡಿ ಗ್ರಾಮ, ಬೋಗಿಹಳ್ಳ ಅರಣ್ಯ, ಎನ್ ಬೇಗೂರು ವಲಯ ವ್ಯಾಪ್ತಿ | ಕೆಂಚ ಬಿನ್ ಮಾರ | 20.00 | ಪಾವತಿಸಲಾಗಿದೆ |
| 25 | ಹಾವೇರಿ | ಕಣವಿಶಿದ್ದಗೇರಿ ಗ್ರಾಮ, ಹಿರೇಕೆರೂರು ವಲಯ ವ್ಯಾಪ್ತಿ, | ಬೀರಪ್ಪ | 20.00 | ಪಾವತಿಸಲಾಗಿದೆ |
| 26 | ಮೈಸೂರು | ಬೆಣ್ಣೆಗೆರೆ ಗ್ರಾಮ, ನುಗು ವನ್ಯಜೀವಿ ವಲಯ, | ರಾಜಶೇಖರಪ್ಪ | 20.00 | ಪಾವತಿಸಲಾಗಿದೆ |
| 27 | ಬೆಂಗಳೂರು ದಕ್ಷಿಣ | ದೊಡ್ಡರು ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ, ವನ್ಯಜೀವಿ ವಲಯ | ಶ್ರೀ ವೆಂಕಟಾಚಲಯ್ಯ ಬಿನ್ ಮುನಿಯಪ್ಪ | 5.00 | ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಬಾಕಿ ಮೊತ್ತವನ್ನು ಪಾವತಿಸಲಾಗುವುದು |
| 28 | ದಕ್ಷಿಣ ಕನ್ನಡ | ಕೆರೆಕಟ್ಟೆ ವನ್ಯಜೀವಿ ವಲಯದ ತುಂಗಾಭದ್ರಾ ಮೀಸಲು ಅರಣ್ಯದ ಮುಡುಬಾ ಸುತ್ತುಗಟ್ಟೆ ನಿವಾಸಿಗಳು | ಹರೀಶ್ ಶೆಟ್ಟಿ | 20.00 | ಪಾವತಿಸಲಾಗಿದೆ |
| 29 | ದಕ್ಷಿಣ ಕನ್ನಡ | ಕೆರೆಕಟ್ಟೆ ವನ್ಯಜೀವಿ ವಲಯದ ತುಂಗಾಭದ್ರಾ ಮೀಸಲು ಅರಣ್ಯದ ಮುಡುಬಾ ಸುತ್ತುಗಟ್ಟೆ ನಿವಾಸಿಗಳು | ಉಮೇಶ ಹೆಗ್ಡೆ | 20.00 | ಪಾವತಿಸಲಾಗಿದೆ |
| 30 | ಮೈಸೂರು | ಸರಗೂರಿನ ಮಟಕೆರೆ ಗ್ರಾಮ, ಮೊಳೆಯೂರು ವಲಯ | ದೊಡ್ಡನಿಂಗಯ್ಯ | 20.00 | ಪಾವತಿಸಲಾಗಿದೆ |
| 31 | ಮೈಸೂರು | ಹಳೇ ಹೆಗ್ಗುಡಿಲು ಗ್ರಾಮ, ಮೊಳೆಯೂರು ವಲಯ | ದಂಡನಾಯಕ | 20.00 | ಪಾವತಿಸಲಾಗಿದೆ |
| 32 | ಕೊಡಗು | ಹೊಸ್ಕೇರಿ ಗ್ರಾಮ, ತಿತಿಮತಿ ವಲಯದ ಚೆನ್ನಂಗಿ ಶಾಖಾ ವ್ಯಾಪ್ತಿಗೆ ಒಳಪಡುವ ಮೇಕೂರು | ಹನುಮಂತ | 20.00 | ಪಾವತಿಸಲಾಗಿದೆ |

| | | | | | |
|---|---|---|---|---|---|
| 33 | ಚಾಮರಾಜನಗರ | ದೊಮ್ಮನಗದ್ದೆ ಅರಣ್ಯ ಪ್ರದೇಶ (ಮಾವತ್ತೂರಿನಿಂದ ಅಥಿಕಾನೆ ಎಸ್ಟೇಟ್ ರಸ್ತೆಗೆ ಸಂಪರ್ಕ ರಸ್ತೆ) ಬೀಟ್:ಮಾವತ್ತೂರು 'ಬಿ' ಬೀಟ್, ಪಿ.ಜಿ.ಪಾಳ್ಯ ವಿಭಾಗ ರೇಂಜ್: ಬೈಲೂರು ವನ್ಯಜೀವಿ ವಲಯ | ಶಿಕಾರಿ ಕ್ಯಾತೆಗೌಡ/ ಶಿಕಾರಿ ಮಾದ | 20.00 | ಪಾವತಿಸಲಾಗಿದೆ |
| 34 | ಶಿವಮೊಗ್ಗ | ಶಿವಪುರ ಗ್ರಾಮ: 5 ನಂ.78/5, ಬೀಟ್: ಸಿದ್ದನಹಳ್ಳಿ, ವಿಭಾಗ: ಕೆಂಚಾಪುರ, ತರೀಕೆರೆ ವಲಯ ವ್ಯಾಪ್ತಿ | ಸಾನ್ವಿ d/o ಬಸವರಾಜು | 20.00 | ಪಾವತಿಸಲಾಗಿದೆ |
| 35 | ಚಾಮರಾಜನಗರ | ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ | ನಾಗಿಯಮ್ಮ | 20.00 | ಪಾವತಿಸಲಾಗಿದೆ |
| | | | **ಒಟ್ಟು** | **635.00** | |

ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

i) ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲು ಅರಣ್ಯದಂಚಿನ ಗ್ರಾಮಗಳಲ್ಲಿ **"AI"** Based Camera ಮತ್ತು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಅಳವಡಿಸಿ ನಿಗಾ ವಹಿಸಲಾಗುತ್ತಿದೆ.

ii) ಅರಣ್ಯದಂಚಿನ ಪ್ರದೇಶಗಳಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿ ಗಡಿರೇಖೆಗಳಲ್ಲಿ ಗಸ್ತು ಕಾರ್ಯ ನಿರ್ವಹಿಸಲಾಗುತ್ತಿದೆ.

iii) ವನ್ಯಜೀವಿಗಳ ಇರುವಿಕೆಯ ಬಗ್ಗೆ ಸ್ಥಳೀಯ ಜನರಿಗೆ ಅರಿವು ಮೂಡಿಸಿ, ಜಾಗರೂಕರಾಗಿರಲು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುಲು ತಿಳಿಸಲಾಗಿರುತ್ತದೆ.

iv) ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆಯಿರುವ/ ಸಂಘರ್ಷದಲ್ಲಿ ತೊಡಗಿರುವ ವನ್ಯಜೀವಿಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆಹಿಡಿಯಲಾಗಿರುತ್ತದೆ.

v) ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ "ಆನೆ ಎಲ್ಲಿ" ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. ಮುಂದುವರೆದು, ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಕೇಂದ್ರ ಸ್ಥಾನದಲ್ಲಿ **ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC)** ಹಾಗೂ **11 ವಿಭಾಗಗಳಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC)** ಸ್ಥಾಪಿಸಲಾಗುತ್ತಿದೆ.

2. ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಅಪಜೀ.114. ಎಫ್.ಡಬ್ಲ್ಯೂ.ಎಲ್.2022, ದಿನಾಂಕ: 29.04.2025 ರಂತೆ ರೂ.20.00 ಲಕ್ಷಗಳ ಪರಿಹಾರ

ಧನವನ್ನು ನೀಡಲಾಗುತ್ತಿದೆ. ಅಲ್ಲದೇ ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022. ದಿನಾಂಕ: 15-12-2022ರಂತೆ ಪ್ರತೀ ತಿಂಗಳಿಗೆ ರೂ.4.000/- ಗಳಂತೆ 05 ವರ್ಷಗಳ ಅವಧಿಗೆ ಮಾಶಾಸನವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

3. ವನ್ಯಜೀವಿಗಳ ಆವಾಸಸ್ಥಾನ ಅಭಿವೃದ್ಧಿ ಕಾಮಗಾರಿಗಳು/ ಲಂಟಾನ/ಇತರೆ ಕಳೆಗಿಡಗಳನ್ನು ನಿರ್ಮೂಲನೆ ಮಾಡಿ ಹುಲ್ಲುಗಾವಲುಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.
4. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

Digitally signed by
KUMAR PUSHKAR
Date: 09-12-2025
18:37:48

ಪ್ರಧ[illegible]ಕಾರಿ
([illegible] ಮುಖ್ಯಸ್ಥರು)